ಪಡೆಯಲು ವಿಳಂಬವಾಗಿದೆ. ಆದಾಗ್ಯೂ ಕಳೆದ ಒಂದು ತಿಂಗಳಿಂದ ಅಸ್ಫಾಲಟ್ ಸರಬರಾಜು ಲಭ್ಯವಾಗಿದ್ದು ವಾರಕ್ಕೆ ಎರಡು ಸಾರಿ ಅಸ್ಫಾಲಟ್ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗಗಳು ಪಡೆಯುತ್ತಲಿದೆ. ರೂ. 14.5 ಲಕ್ಷ ಮುಂಗಡ ಹಣವನ್ನು 261 ಮೆಟ್ರಿಕ್ ಟನ್ ಅಸ್ಫಾಲಟ್ ಬೇಡಿಕೆ ಪಾವತಿಸಿದೆ. ಈಗಾಗಲೇ 131 ಮೆಟ್ರಿಕ್ ಟನ್ ಅಸ್ಫಾಲಟ್ ಬಂದಿದ್ದು, ಕಾಮಗಾರಿಗಳು ಸಾಗುತ್ತಿವೆ. ಈ ಅಸ್ಫಾಲಟ್ ಕೊರತೆಯಿಂದಾಗಿ ಯಾವುದೇ ಅನುದಾನ ಲ್ಯಾಪ್ಸ್ ಆಗದಂತೆ ನೋಡಿಕೊಳ್ಳಲಾಗಿದೆ.

11.50 ಎ.ಎಂ

4) ವೃತ್ತಿ ಶಿಕ್ಷಣಕ್ಕೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳಿಗೆ ಪ್ರವೇಶ ಪರೀಕ್ಷೆ

ಶ್ರೀ ಯು.ಆರ್. ಸಭಾಪತಿ (ಉಡುಪಿ) : ಸನ್ಮಾನ್ಯ ಸಭಾಧ್ಯಕ್ಷರೆ, ಉನ್ನತ ಶಿಕ್ಷಣ ಸಚಿವರಲ್ಲಿ, ಕಳೆದ ಬಾರಿ ಈ ರಾಜ್ಯದ ವೃತ್ತಿ ಶಿಕ್ಷಣಕ್ಕೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳಿಗೆ ಪ್ರವೇಶ ಪರೀಕ್ಷೆಯನ್ನು ಮಾಡುವುದಿಲ್ಲ ಎಂದು ಸರ್ಕಾರ ಪ್ರಥಮಹಂತದಲ್ಲಿ ಹೇಳಿಕೆಯನ್ನು ನೀಡಿ ಕೊನೆ ಗಳಿಗೆಯಲ್ಲಿ ಧಿಡೀರಾಗಿ ಪ್ರವೇಶ ಪರೀಕ್ಷೆಯನ್ನು ಜರುಗಿಸಿ ವಿದ್ಯಾರ್ಥಿಗಳಲ್ಲಿ ಸಾಕಷ್ಟು ಗೊಂದಲವನ್ನು ಉಂಟುಮಾಡಿ ಅವರ ಭವಿಷ್ಯಕ್ಕೆ ಮಾರಕವಾಗುವಂತಾಗಿದೆ. 1996-97ರಲ್ಲಿ ವೃತ್ತಿ ಶಿಕ್ಷಣಕ್ಕೆ ಅರ್ಜಿ ಹಾಕುವ ವಿದ್ಯಾರ್ಥಿಗಳಿಗೆ ಪ್ರವೇಶಪರೀಕ್ಷೆ ಮಾಡುವ ಇರದೆ ಸರ್ಕಾರಕ್ಕೆ ಇದೆಯೇ? ಇದೆ ಎಂದಾದಲ್ಲಿ ಸಾಕಷ್ಟು ಮುಂದಾಗಿಯೇ ದಿನಾಂಕವನ್ನು ಪ್ರಕಟಿಸುದಲ್ಲಿ ವಿದ್ಯಾರ್ಥಿಗಳಿಗೆ ಅಧ್ಯಯನಕ್ಕೆ ಅನುಕೂಲವಾಗುವುದು ಸರ್ಕಾರದ ಈ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತವಾಗಬೇಕೆಂದು ವಿನಂತಿಸುತ್ತೇನೆ.

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ಪ್ರವೇಶ ಪರೀಕ್ಷೆಯನ್ನು ಮಾಡುವ ಬಗ್ಗೆ ಕಳೆದ ವರ್ಷ ಕೆಲವು ನಿಯಮಾವಳಿಗಳನ್ನು ತಿದ್ದುಪಡಿ ಮಾಡಿದ್ದೇವೆ. ಅದರ ಜೊತೆಗೆ ಕೋರ್ಟಿನಿಂದ ಬಂದ ತೀರ್ಪುಗಳ ಪ್ರಕಾರ ಸ್ವಲ್ಪ ತಡವಾಗಿದೆ. ಈಗಾಗಲೇ ಈ ವರ್ಷ ನಾವು ಕಾರ್ಯಪ್ರವೃತ್ತರಾಗಿದ್ದೇವೆ. ಈಗ ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದ್ದೇವೆ. ಆ ಸಮಿತಿಯು ಇಷ್ಟರಲ್ಲಿ ತೀರ್ಮಾನವನ್ನು ಮಾಡಿ ವೇಳಾಪಟ್ಟಿಯನ್ನು ಪ್ರಕಟಿಸಲಾಗುತ್ತದೆ. ಈ ವರ್ಷ ಏನು ವಿಳಂಬವಾಗುವುದಿಲ್ಲ.

5) 1993-94 ಮತ್ತು 1994-95ರ ಆಶ್ರಯ ಮತ್ತು ಅಂಬೇಡ್ಕರ್ ಮನೆಗಳಿಗೆ ಹಣಪಾವತಿ ಮಾಡುವ ಕುರಿತು

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಅಧ್ಯಕ್ಷರೆ, ಆಶ್ರಯ ಮತ್ತು ಅಂಬೇಡ್ಕರ್ ಮನೆಗಳಿಗೆ 93-94 ಮತ್ತು 94-95ರ ಮನೆಗಳಿಗೆ ಪೂರ್ಣಗೊಳ್ಳದೆ ಇರುವುದರಿಂದ ಫಲಾನುಭವಿಗಳು ಗ್ರಾಮದಿಂದ ತಾಲ್ಲೂಕಿಗೆ ಪರದಾಡಬೇಕಾದಂಥ ಪರಿಸ್ಥಿತಿ ಬಂದಿದೆ. ಹಿಂದಿನ ಸರ್ಕಾರ ಮಂಜೂರು ಮಾಡಿದ ಫಲಾನುಭವಿಗಳು ಎಂಬ ಒಂದು ಕಾರಣದಿಂದ ಆರ್ಥಿಕವಾಗಿ ಹಿಂದುಳಿದ ಫಲಾನುಭವಿಗಳಿಗೆ ಕಿರುಕುಳ ಕೊಡುವುದು ನ್ಯಾಯವೂ ಅಲ್ಲ, ಧರ್ಮವೂ ಅಲ್ಲ ಅಥವಾ ಒಳ್ಳೆಯ ಸಂಪ್ರದಾಯವೂ ಅಲ್ಲ. ಅದೂ ಅಲ್ಲದೆ ಹಿಂದಿನ ಸರ್ಕಾರ ಮಂಜೂರು ಮಾಡಿರತಕ್ಕಂಥ ಮನೆಗಳಿಗೆ ಹಣವನ್ನು ಬಿಡುಗಡೆ ಮಾಡಲಾಗಿದೆ. ಸರ್ಕಾರ ಇನ್ನಾದರೂ ಹಿಂದಿನ ಮತ್ತು ಇಂದಿನ ಮಂಜೂರಾದಂಥ ಎಲ್ಲ ಮನೆಗಳಿಗೆ ಸಕಾಲದಲ್ಲಿ ಹಣ ಬಿಡುಗಡೆ ಮಾಡಬೇಕೆಂದು ಸದನದ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ಶ್ರೀ ಬಸವರಾಜ ರಾಯರೆಡ್ಡಿ (ವಸತಿ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ,